ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 24.09.2024.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ, ನಾನು ಓದಿಲ್ಲ, ನನಗೆ ಓದಲು ಬರುವುದಿಲ್ಲ, ಏನು ಬರೆದಿರುತ್ತಾರೆ ಎಂದು ಕೂಡಾ ನನಗೆ ಗೊತ್ತಿಲ್ಲ. ಅದರಲ್ಲಿರುವ ಸಂಗತಿಗಳನ್ನು ಓದಿ ಹೇಳಿರುತ್ತಾರೆ. ನನಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಸಂಗತಿಗಳನ್ನು ವಾದಿ ತಮ್ಮ ಧರ್ಮರಾಯ ನನಗೆ ಓದಿ ಹೇಳಿರುತ್ತಾರೆ. ಸದರಿ ಧರ್ಮರಾಯ ಎಷ್ಟು ಶಾಲೆ ಕಲಿತಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ವಾದಿ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದ ಕಾರಣ ನಾನು ಸಾಕ್ಷಿ ನುಡಿಯಲು ಬಂದಿರುತ್ತೇನೆ. ವಾದಿ ತಮ್ಮನಿಗೆ ಇಂಗ್ಲೀಷ್ ಭಾಷೆ ಬರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರದೇ ಇರುವ ಕಾರಣ, ಅವು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ವಾದಿ ಮಾತು ಕೇಳಿ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ಸುಳ್ಳು ಇದ್ದರೂ ಸಹ ಸತ್ಯವಾಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತವರು ಮನೆ ಮತ್ತು ಗಂಡನ ಮನೆ ಎರಡು ನಿಂಬರ್ಗಾ ಗ್ರಾಮ ಇರುತ್ತದೆ. ವಾದಿ ನನಗೆ ಅತ್ತೆಯ ಮಗಳು ಆಗಬೇಕು. ವಾದಿ ತನ್ನ ಮಾವ ಶಿವಣ್ಣ ಇರುವವರೆಗೂ ಗಂಡನ ಮನೆಯಲ್ಲಿಯೇ ಇದ್ದಳು ಎಂದರೆ ಸರಿಯಲ್ಲ. ವಾದಿ ಮದುವೆಯಾದ ನಂತರ 4 ತಿಂಗಳ ಕಾಲ ಗಂಡನ ಮನೆಯಲ್ಲಿ ಇದ್ದರು. ನಂತರ ಅವಳ ಗಂಡ ಕಾಣೆಯಾದ ಮೇಲೆ ಪ್ರತಿವಾದಿಗಳು ಅವಳನ್ನು ತಮ್ಮ ಇಟ್ಟುಕೊಳ್ಳದೇ ಇರುವ ಕಾರಣ, ವಾದಿ ತಮ್ಮ ತಾಯಿ ಮನೆಗೆ ಬಂದಿರುತ್ತಾರೆ. ವಾದಿ ತನ್ನ ತವರು ಮನೆಯಲ್ಲಿ ಇದ್ದು ಸುಮಾರು 25 ವರ್ಷವಾಗಿರುತ್ತದೆ.

ವಾದಿ ತನ್ನ ಮಾವ ತಿರಿಕೊಳ್ಳುವವರೆಗೂ ಗಂಡನ ಮನೆಯಲ್ಲಿ ಇದ್ದು, ತದನಂತರ ಈ ಕೇಸ್

ಮಾಡುವ ಸಲುವಾಗಿ ತನ್ನ ತವರು ಮನೆಗೆ ಹೋಗಿರುತ್ತಾಳೆ ಎಂದರೆ ಸರಿಯಲ್ಲ. ವಾದಿ ಗಂಡ ಇವತ್ತಿನವರೆಗೂ ತಿರಿಕೊಂಡಿಲ್ಲ ಹಾಗೂ ಊರಿಗೆ ಬಂದು ಹೋಗಿ ಮಾಡುತ್ತಾರೆ ಎಂದರೆ ಸರಿಯಲ್ಲ. ವಾದಿ ಅಣ್ಣ-ತಮ್ಮಂದಿರು ಅವಳಿಗೆ ಆಸ್ತಿ ಬರುತ್ತದೆ ಎಂಬ ಉದ್ದೇಶದಿಂದ, ಅವಳಿಂದ ಸುಳ್ಳು ಕೇಸ್ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಯ ಮೈದುದಾರರು ಎಂದರೆ ಸರಿ. ಪ್ರತಿವಾದಿಗಳು ಒಕ್ಕಲುತನ ಮಾತ್ರ ಮಾಡುತ್ತಾರೆ, ಅದನ್ನು ಬಿಟ್ಟು ಬೇರೆ ಉದ್ಯೋಗ ಇಲ್ಲ ಎಂದರೆ ಸರಿ. ಬೇರೆಯವರ ಜಮೀನುಗಳನ್ನು ಸಾಗುವಳಿ ಮಾಡಿ ಉತ್ಪನ್ನ ತೆಗದುಕೊಳ್ಳುತ್ತಿದ್ದಾರೆ ಎಂದರೆ, ಸಾಕ್ಷಿ ಸ್ವಂತ ಉದ್ಯೋಗ ಮಾಡುತ್ತಾರೆ ಎಂದುನುಡಿಯುತ್ತಾರೆ. ಪ್ರತಿವಾದಿಗಳಿಗೆ ಎಷ್ಟು ಹಿರಿಯರ ಹೊಲಗಳು ಇವೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಹೊಲಗಳನ್ನು ಖರೀದಿಸಿರುತ್ತಾರೆ ಎಂದು ಕೂಡಾ ನನಗೆ ಗೊತ್ತಿಲ್ಲ. ನನಗೆ ಯಾವುದೇ ಸಂಗತಿ ಗೊತ್ತಿರದೇ ಇದ್ದರೂ ಕೂಡಾ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಂಡ ಕಾಣೆಯಾಗಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ._

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 24.09.2024.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ:**

1ನೇ ಪ್ರತಿವಾದಿ ಮತ್ತು ಅವರ ಅಣ್ಣ-ತಮ್ಮಂದಿರು ನನಗೆ ಮಾವಂದಿರು ಆಗಬೇಕು. ವಾದಿ ಮದುವೆ ಊರಲ್ಲಿಯೇ ಆಗಿರುತ್ತದೆ. ವಾದಿಯ ಅಜ್ಜ, 1ನೇ ಪ್ರತಿವಾದಿಯ ತಂದೆಯಾಗಬೇಕು. ವಾದಿಯ ಮದುವೆ ಕಾಲಕ್ಕೆ ನಾನು ಕೂಡಾ ಹಾಜರಿದ್ದೆ. ವಾದಿ ತನ್ನ ಗಂಡ ತಿರಿಕೊಳ್ಳುವವರೆಗೂ ಗಂಡನ ಮನೆಯಲ್ಲಿಯೇ ಇದ್ದಳು ಎಂದರೆ ಸರಿಯಲ್ಲ. ವಾದಿ ಗಂಡ ಸಂಗಣ್ಣ ಏನು ಕೆಲಸ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ವಾದಿ ಗಂಡನಿಗೆ ಯಾವುದೇ ಖಾಯಿಲೇ ಇರಲಿಲ್ಲ ಹಾಗೂ ಆತನಿಗೆ ಬುದ್ಧಿ ಬ್ರಮಣೆಯಾಗಿರಲಿಲ್ಲ. 1ನೇ ಪ್ರತಿವಾದಿ ಕುಟುಂಬಕ್ಕೆ ಎಷ್ಟು ಆಸ್ತಿ ಇತ್ತು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ, ಆದರೆ ಊರಿಗೆ ಹತ್ತಿದ ಜಮೀನಿಗೆ ಈಗ ಪ್ಲಾಟ್ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

1ನೇ ಪ್ರತಿವಾದಿ ಹಿರಿಯರ ಆಸ್ತಿಗಳನ್ನು ಉಳಿದ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ, ಸಾಕ್ಷಿ ಪ್ಲಾಟ್‌ಗಳನ್ನು ಮಾರಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಬೇರೆಯವರ ಜಮೀನುಗಳನ್ನು ಕೂಡಾ ಬಟಾಯಿ ಮಾಡುತ್ತಿದ್ದರು ಎಂದರೆ ಸರಿ. ಸದರಿ ಉತ್ಪನ್ನದಿಂದಲೇ ಪ್ರತಿವಾದಿಗಳು ತಮ್ಮ-ತಮ್ಮ ಹೆಸರಿನಲ್ಲಿ ಬೇರೆ-ಬೇರೆಯಾಗಿ ಜಮೀನುಗಳನ್ನು ಖರೀದಿಸಿರುತ್ತಾರೆ ಎಂದರೆ, ಸಾಕ್ಷಿ ಪ್ಲಾಟ್‌ಗಳನ್ನು ಮಾರಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವ ಹಾಗೇ ಪ್ಲಾಟ್‌ಗಳನ್ನು ಮಾರಿ ಖರೀದಿಸಿರುತ್ತಾರೆ ಎಂದು ಹೇಳಿದ್ದು, ಸದರಿ ಪ್ಲಾಟ್ ಗಳನ್ನು ಎಷ್ಟಕ್ಕೆ ಮಾರಿರುತ್ತಾರೆ, ಯಾರಿಗೆ ಮಾರಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಆದರೆ ರೂ.4-5ಲಕ್ಷಕ್ಕೆ ಒಂದೊಂದು ಪ್ಲಾಟ್‌ಗಳನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಪ್ಲಾಟ್‌ಗಳನ್ನು ಮಾರಿ ಹೊಲ ಖರೀದಿಸಿರುತ್ತಾರೆ ಎಂದು ಹೇಳುವ ಸಂಗತಿ ವಾದಿಗೆ ಸಹಾಯ

ಮಾಡುವ ಉದ್ದೇಶದಿಂದ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಂಡ ಗಾಯಬ್ ಆದ ಸಮಯದಲ್ಲಿ ಅವರ ಕುಟುಂಬದವರು ಹುಡುಕಲು ಪ್ರಯತ್ನಿಸಿರುತ್ತಾರೆ, ನಾನೇನು ಹುಡುಕಲು ಹೋಗಿಲ್ಲ. ವಾದಿ ಗಂಡ ಸಂಗಣ್ಣ ಪ್ರತಿವಾದಿಗಳ ಕುಟುಂಬದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಬಂದು ಹಾಜರಾಗಿ ಹೋಗುತ್ತಾರೆ ಎಂದರೆ ಸರಿಯಲ್ಲ. ವಾದಿ ಗಂಡ ಇನ್ನುವರೆಗೂ ಜೀವಂತ ಇದ್ದಾರೆ ಎಂದರೆ, ಇರಬಹುದು ಆದರೆ ಊರಿಗೆ ಬಂದಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೊಡಿಸಬೇಕೆಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಗಂಡ ಆಗಿಂದ ಹಾಗೇ ವಾದಿಯನ್ನು ಬೇಟಿಯಾಗುತ್ತಾರೆ ಎಂದರೆ ಸರಿಯಲ್ಲ. ವಾದಿ ಗಂಡ ಮದುವೆಯಾಗಿನಿಂದ ಕಾಣೆಯಾಗಿರುತ್ತಾನೆ ಎಂದು ಹೇಳಿದ ಸಂಗತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ವಾದಿ, ಪ್ರತಿವಾದಿ ಕುಟುಂಬದವರು ನನಗೆ ಬಿಗರು ಆಗಬೇಕೆಂಬ ಉದ್ದೇಶದಿಂದ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**